RA No. 22/2023
PW-1

ದಿನಾಂಕಃ 03-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀಸವಾಲುಃ- ಎದುರುದಾರರ ಪರ ಶ್ರೀ. ಎಸ್ ಬಿ ಕೆ ವಕೀಲರಿಂದ.**

ಅಸಲು ದಾವಾ ನಂ.209/2016 ನೇದ್ದನ್ನು ನಾವುಗಳು ಎದುರುದಾರರ ವಿರುದ್ಧ ದಾಖಲು ಮಾಡಿದ್ದು ಇತ್ತು. ಸದರಿ ದಾವೆಯಲ್ಲಿ ಏನು ತೀರ್ಪು ಆಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ತೀರ್ಪಿನ ದಿನಾಂಕ ಹೇಳಿದ್ದು, ಅದು ನನ್ನ ಹೇಳಿಕೆಯ ಪ್ರಕಾರವೇ ಇರುತ್ತದೆ. ನನ್ನ ಸಾಕ್ಷ ಪ್ರಮಾಣ ಪತ್ರದಲ್ಲಿ ನಾವು 2004 ರಲ್ಲಿ ದಾವೆ ಸಲ್ಲಿಸಿದ್ದು, ಅದು 3 ವರ್ಷಗಳ ನಂತರ ತೀರ್ಪು ಆಗಿರುತ್ತದೆ. ಹಾಗೇ ತೀರ್ಪು ಆದ ದಿನಾಂಕ ಹೇಳಲು ಬರುವುದಿಲ್ಲ. ತೀರ್ಪು ಆದ ದಿನಾಂಕದಿಂದ ಒಂದು ತಿಂಗಳೊಳಗೆ ತೀರ್ಪು ಪ್ರತಿ ಪಡೆದುಕೊಳ್ಳಲು ಅರ್ಜಿ ಸಲ್ಲಿಸಿದ್ದು, ಹಾಗೇ ಯಾವ ದಿನಾಂಕದಂದು ಅರ್ಜಿ ಸಲ್ಲಿಸಿರುತ್ತೇನೆ ಎಂದು ಹೇಳಲು ಬರುವುದಿಲ್ಲ. ನಾನು ಈಗ ಯಾವ ವಿಷಯಕ್ಕೆ ಸಂಬಂಧಿಸಿದಂತೆ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದು ಹೇಳಲು ಬರುವುದಿಲ್ಲ. ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಏನು ಸಂಗತಿಗಳನ್ನು ಬರೆಯಲಾಗಿರುತ್ತದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಈ ಅರ್ಜಿಯಲ್ಲಿ ನಾನು ಕೋರಿದ ಪರಿಹಾರಕ್ಕೆ ಅರ್ಹರು ಅಲ್ಲ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ನಾವು ಸಲ್ಲಿಸಿಲ್ಲ. ಈ ಅರ್ಜಿಯಲ್ಲಿಯ ಯಾವ ಪರಿಹಾರಕ್ಕೂ ನಾವು ಅರ್ಹರಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).